# ಪೆಟ್ಟಿಗೆಯಲ್ಲಿ ರಾಜಕುಮಾರಿ

ಭಾಗ–2



ಯುವಕ ಹಾಗೂ ಮಾರುವೇಷದಲ್ಲಿದ್ದ ಮಂತ್ರಿಯ ಮಗ ಮನೆಯ ಮುಂದಿನ ಕೋಣೆಯಲ್ಲಿ ಮಲಗಿದರು. ಮಧ್ಯರಾತ್ರಿಯಲ್ಲಿ ಯುವಕನಿಗೆ ಎಚ್ಚರವಾಯಿತು. ಯಾರೋ ನರಳುತ್ತಿದ್ದಾರೆಂದು ಅನಿಸಿತು. ಎದ್ದು ನಿಧಾನವಾಗಿ ನರಳಾಟದ ದನಿ ಬಂದತ್ತ ನಡೆದ. ಆ ದನಿ ಹಿಂದಿನ ಕೋಣೆಯಿಂದಲೇ ಬರುತ್ತಿತ್ತು. ಭೂತದ ಕಾಟವಿರಬಹುದೆಂದು ಸುಮ್ಮನಾದ. ದನಿ ಇನ್ನೂ ತೀಕ್ಷ್ಣವಾಗುತ್ತಿತ್ತು. ಧೈರ್ಯ ತಳೆದ ಯುವಕ ಹಿಂದಿನ ಬಾಗಿಲಿನ ಬೀಗವನ್ನು ತೆಗೆದ. ಭೂತದ ಪೆಟ್ಟಿಗೆಯಿಂದಲೇ ನರಳುವ ದನಿ ಸ್ಪಷ್ಟವಾಗಿ ಕೇಳಿಸಿತು. ಪಾಪ!, ಭೂತಕ್ಕೇನು ಆಯಿತು? ಸಹಾಯವನ್ನು ಕೇಳುತ್ತಿರಬಹುದೆ? ಎಂದು ಯೋಚಿಸುತ್ತ, ಪೆಟ್ಟಿಗೆಯ ಬಾಗಿಲನ್ನು ನಿಧಾನವಾಗಿ ತೆರೆದ. ಭೂತ ಹೊರಬಂದು ತನ್ನನ್ನು ಹಿಡಿದರೆ ಎಂದು ಮನೆಯಲ್ಲಿದ್ದ ಒಂದು ಖಡ್ಗವನ್ನೂ ಕೈಯಲ್ಲಿ ಹಿಡಿದ.

ಭೂತವಾಗಲೀ–ದೆವ್ವವಾಗಲೀ ಪೆಟ್ಟಿಗೆಯಿಂದ ಬರಲಿಲ್ಲ. ಧೈರ್ಯ ತೆಗೆದುಕೊಂಡು ಪೆಟ್ಟಿಗೆಯಲ್ಲಿ ಬಗ್ಗಿ ನೋಡಿದ. ನರಳಾಟದ ದನಿ ಹೆಣ್ಣಿನದು ಎಂದೆನಿಸಿತು. ಸಣ್ಣ ಹಣತೆಯನ್ನು ತಂದು ಪರೀಕ್ಷಿಸಿದ. ಸುಂದರ ಹೆಣ್ಣುಮಗಳೊಬ್ಬಳು, ಹಗ್ಗದಿಂದ ಬಂಧಿಸಲ್ಪಟ್ಟು ಒದ್ದಾಡುತ್ತಿದ್ದಳೆ! ಅನುಕಂಪಗೊಂಡು ಹಗ್ಗ ಬಿಚ್ಚಿದ. ರಾಜಕುಮಾರಿ ಎಲ್ಲ ಕತೆಯನ್ನೂ ಹೇಳಿದಳು. ತನ್ನನ್ನು ರಕ್ಷಿಸಬೇಕೆಂದೂ ಕೇಳಿಕೊಂಡಳು.

ಯುವಕನ ಮನೆಯ ಹಿಂದಕ್ಕೆ ಒಂದು ತೋಟವಿತ್ತು. ತೋಟದ ಮನೆಯಲ್ಲಿ ಯುವಕ ಒಂದು ಸಿಂಹವನ್ನು ಸಾಕಿದ್ದ. ರಾಜಕುಮಾರಿಯನ್ನು ತೋಟದ ಮನೆಯಲ್ಲಿ ಇರಿಸಿದ. ಸಾಕಿದ ಸಿಂಹವನ್ನು ತಂದು, ಮಂತ್ರಿಯ ಮಗನ ಪೆಟ್ಟಿಗೆಯಲ್ಲಿ ಇಟ್ಟು ಬಿಟ್ಟ. ಮೊದಲಿನಂತೆ ಪೆಟ್ಟಿಗೆಯ ಬಾಗಿಲನ್ನು ಹಾಕಿ, ಕೋಣೆಯ ಬಾಗಿಲನ್ನೂ ಹಾಕಿ ತನ್ನ ಸ್ಥಳಕ್ಕೆ ಹೋಗಿ ಮಲಗಿಕೊಂಡ.

ಬೆಳಗ್ಗೆ ಏಳುತ್ತಲೇ ಮಾಂತ್ರಿಕ ವೇಷಧಾರಿ ಮಂತ್ರಿಯ ಮಗ ಯುವಕನನ್ನು ಕೇಳಿದ, 'ಹುಡುಗಾ, ರಾತ್ರಿ ಭೂತದ ಪೆಟ್ಟಿಗೆಯನ್ನು ತೆರೆಯುವ ಸಾಹಸ ಮಾಡಲಿಲ್ಲ ತಾನೆ? ಅದೊಂದು ಕೆಟ್ಟ ಭೂತ!' ಎಂದ. 'ಅಯ್ಯೋ ನಾನೇಕೆ ಪೆಟ್ಟಿಗೆಯನ್ನು ತೆರೆಯಲಿ? ಅದರಲ್ಲಿ ಭೂತ ಇದೆಯೆಂದೂ ಹೇಳಿದ್ದೀರಿ. ಭೂತವೆಂದರೆ ನನಗೆ ತುಂಬ ಭಯ' ಎಂದ ಯುವಕ.

ಮಂತ್ರಿಯ ಮಗ ಹೆಚ್ಚು ಸಮಯ ವ್ಯಯ ಮಾಡಲಿಲ್ಲ. ಮರದ ಪೆಟ್ಟಿಗೆಯನ್ನು ಹೊತ್ತು ಕಾಡಿನ ಹಾದಿ ತುಳಿದ.

'ನಿನ್ನೆಗಿಂತ ಪೆಟ್ಟಿಗೆ ಇಂದು ಭಾರವಾಗಿದೆಯಲ್ಲ, ಏನು ಕಾರಣವಿರಬಹುದು?ಎಂದು ಯೋಚಿಸಿದ. 'ದುಃಖಿತಳಾದ ರಾಜಕುಮಾರಿಯ ಕಣ್ಣೀರಿಂದ ಪೆಟ್ಟಿಗೆ ಭಾರವಾಗಿದೆ. ತಾಳಿ ಕಟ್ಟಿಬಿಟ್ಟರೆ ಎಲ್ಲ ಸರಿಯಾಗುತ್ತದೆ' ಎಂದು ತನಗೆ ತಾನೆ ಅಂದುಕೊಂಡ.

ಮಧ್ಯಾಹ್ನ ಸುಮಾರು ಹನ್ನೆರಡು ಗಂಟೆ. ಭಾರವಾದ ಪೆಟ್ಟಿಗೆಯನ್ನು ತಲೆಯಿಂದ ಕೆಳಗಿಳಿಸಿದ ಮಂತ್ರಿಕುಮಾರ. ಕಾಡಿಗೆ ಸೌದೆ ಆರಿಸಲು ಬಂದಿದ್ದ ಕಾಡುಜನರನ್ನು ಹತ್ತಿರಕ್ಕೆ ಕರೆದು ಹೇಳಿದ, 'ನಾನೀಗ ಪೆಟ್ಟಿಗೆಯನ್ನು ತೆರೆಯುತ್ತೇನೆ. ಅಲ್ಲೊಬ್ಬ ಸುಂದರ ರಾಜಕುಮಾರಿ ಇದ್ದಾಳೆ. ನಾನು ತಾಳಿ ಕಟ್ಟುತ್ತೇನೆ. ಆಕೆ ನನ್ನ ಮಡದಿಯಾಗುತ್ತಾಳೆ. ನೀವು ಅರಿಶಿಣ –ಕುಂಕುಮ ನಮ್ಮ ಮೇಲೆ ಸಿಂಪಡಿಸಿ, ಗಂಟೆ ಬಾರಿಸಿ, ಹೂಗಳನ್ನು ನಮ್ಮ ಮೇಲೆ ಹಾಕಿರಿ. ನಾಳೆ ಯಾರಾದರೂ ಕರೆದು ಕೇಳಿದರೆ ರಾಜಕುಮಾರಿ ನನ್ನ ಮಡದಿ ಎಂದು ಹೇಳಬೇಕು, ತಿಳಿಯಿತೆ?'

ಮಂತ್ರಿಯ ಮಗನ ಅಪೇಕ್ಷೆಯಂತೆ ಕಾಡು ಜನರು ಗಂಟೆ ಬಾರಿಸಿದರು, ಹೂ ಹಾಕಿದರು, ಅರಿಶಿಣ–ಕುಂಕುಮ ಸಿಂಪಡಿಸಿದರು. ಮಂತ್ರಿಮಗ ಸೊಂಟಕ್ಕೆ ಸಿಕ್ಕಿಸಿಕೊಂಡಿದ್ದ ಮಾಂಗಲ್ಯ ಸೂತ್ರವನ್ನು ಕೈಯಲ್ಲಿ ಹಿಡಿದ. ಪ್ರಸನ್ನ ಚಿತ್ತನಾಗಿ ಮುಂದಿನ ಸುಂದರ ಭವಿಷ್ಯದ ಕನಸು ಕಾಣುತ್ತ ಪೆಟ್ಟಿಗೆಯ ಬಾಗಿಲು ತೆರೆದ.

ಪೆಟ್ಟಿಗೆಯಿಂದ ಹಾರಿಬಂದ ಸಿಂಹವನ್ನು ಕಂಡು ಕಾಡುಜನರು ಓಟಕಿತ್ತರು. ಏನಾಗುತ್ತದೆ ಎಂದು ಅರಿಯುವ ಮೊದಲೇ ಮಂತ್ರಿ ಮಗನ ಪ್ರಾಣ ಪಕ್ಷಿ ಹಾರಿ ಹೋಗಿತ್ತು!

ಇತ್ತ ರಾಜಧಾನಿಯಲ್ಲಿ ಮಂತ್ರಿಯ ಯೋಜನೆ ಫಲಿಸಿತ್ತು. ಗುರುದಕ್ಷಿಣೆಯನ್ನು ಕೊಡಲು ಹೋದ ರಾಜಕುಮಾರಿಯನ್ನು ಗುರುವೇ ಅಪಹರಿಸಿ ಒಯ್ದಿದ್ದಾನೆ, ಬಲಾತ್ಕಾರದಿಂದ ಆಕೆಯನ್ನು ಮದುವೆಯಾಗುತ್ತಾನಂತೆ ಎಂದು ವಿಷಯ ಹಬ್ಬಿತು.

ರಾಜಕುಮಾರಿ ಕಣ್ಮರೆಯಾದುದರಿಂದ ರಾಜ ದುಃಖಿತನಾದ. ರಾಜಕುಮಾರಿಯನ್ನು ರಕ್ಷಿಸಿಕೊಂಡು ಬರುವವರಿಗೆ ಅರ್ಧ ರಾಜ್ಯವನ್ನು ಕೊಡುತ್ತೇನೆಂದು ಘೋಷಿಸಿದ. ರಾಜಕುಮಾರಿಯ ಗುರುವನ್ನು ಹಿಡಿದು ತರುವವರಿಗೂ ಬಹುಮಾನ ಘೋಷಿಸಿದ. ಎಲ್ಲವೂ ತನ್ನ ಯೋಜನೆಯಂತೆ ನಡೆಯುತ್ತಿದೆಯೆಂದು ಮಂತ್ರಿ ಖುಷಿಯಿಂದ ಬೀಗಿದ. ರಾಜಕುಮಾರಿಯನ್ನು ತರುವ ತನ್ನ ಮಗನಿಗೆ ಅರ್ಧ ರಾಜ್ಯ ಖಂಡಿತ. ಗುರುವನ್ನು ಹಿಡಿದು ತರುವುದರಿಂದ ತನಗೂ ಬಹುಮಾನ ಎಂದು ಸಂತಸಪಟ್ಟ ಮಂತ್ರಿ.

ರಾಜಕುಮಾರಿಯಿಂದ ಯುವಕ ವಿವರಗಳನ್ನು ತಿಳಿದ. ಆಕೆಯ ಸಂಕಟಕ್ಕೆ ಮರುಗಿದ. ರಾಜಕುಮಾರಿಯ ಸಲಹೆಯಂತೆ ಯುವಕ ಅವಳ ಜೊತೆ ರಾಜಧಾನಿಯತ್ತ ನಡೆದ. ಮಂತ್ರಿಯ ಮಗನ ಭಯ ಇದ್ದೇ ಇತ್ತು. ನಿಜ ತಿಳಿದು ಅವನು ಹಿಂತಿರುಗಬಹುದೆಂಬ ಶಂಕೆ ಇತ್ತು. ಯುವಕ ಮತ್ತು ರಾಜಕುಮಾರಿ ವೇಷ ಮರೆಸಿ ರಾಜನ ಅರಮನೆಯಲ್ಲಿ ಕಾಣಿಸಿಕೊಂಡರು. ರಾಜನಿಗೆ ತನ್ನ ಮಗಳನ್ನು ಕಂಡು ಆನಂದವಾಯಿತು. ಮಾತಿನಂತೆ ಅರ್ಧ ರಾಜ್ಯವನ್ನು ಯುವಕನಿಗೆ ಕೊಟ್ಟ. ಜೊತೆಗೆ ರಾಜಕುಮಾರಿಯನ್ನೂ ಧಾರೆ ಎರೆದು ಮದುವೆ ಮಾಡಿಕೊಟ್ಟ.

ಮಂತ್ರಿಯ ಕೆಟ್ಟ ಯೋಜನೆ ರಾಜನಿಗೆ ಅರ್ಥವಾಯಿತು. ಅವನಿಂದ ವಿವರ ತಿಳಿದು ಗುರುವನ್ನು ರಕ್ಷಿಸಿ ಅರಮನೆಗೆ ಕರೆಸಿದ. ಮಂತ್ರಿಯನ್ನು ಆತನ ಸ್ಥಾನದಿಂದ ಉಚ್ಚಾಟಿಸಿದ. ರಾಜಕುಮಾರಿಯ ಗುರುವನ್ನೇ ರಾಜ್ಯದ ಮಂತ್ರಿಯನ್ನಾಗಿ ನೇಮಿಸಿದ. ಮಂತ್ರಿ ತನ್ನ ಮಗನೊಂದಿಗೆ ಪದವಿಯನ್ನೂ ಕಳೆದುಕೊಂಡು ಹುಚ್ಚನಾಗಿಹೋದ.

ಯುವಕ, ರಾಜಕುಮಾರಿಯೊಂದಿಗೆ ಖುಷಿಯಾಗಿದ್ದ. ರಾಜ ಕೂಡ ಹತ್ತಾರು ವರ್ಷ ಜನಾನುರಾಗಿಯಾಗಿ ರಾಜ್ಯಭಾರ ಮಾಡಿದ.

(ಮುಗಿಯಿತು)

**-ಮತ್ತೂರು ಸುಬ್ಬಣ್ಣ**